# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.141/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ನಾಗರಾಜ್ ಕೆ. | CW: 1 | PW: 1 |
| ತಂದೆಯ ಹೆಸರು | : | ಹಾಲಪ್ಪ ಕೆ. | | |
| ವಯಸ್ಸು | : | 42 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಗೋವಿನಕೋವಿ | | |

ದಿನಾಂಕಃ 16.10.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ.2 ರಿಂದ 6 ರವರು ಗೊತ್ತು. 2023 ನವೆಂಬರ್ ತಿಂಗಳಿನಲ್ಲಿ ಗೋವಿನಕೋವಿ ಗ್ರಾಮದ ಸರ್ವೆ ನಂ.4/2 ರ ನಮ್ಮ ಜಮೀನಿನನಲ್ಲಿ ಕಲ್ಲು ನೆಡುತ್ತಿದ್ದಾಗ, ಆರೋಪಿಗಳು ಬಂದು ಸರ್ವೆ ಮಾಡಿಸಿದಂತಹ ಕಲ್ಲುಗಳನ್ನು ಕಿತ್ತು ಹಾಕಿ ಮುರಿದು ಪುಡಿಪುಡಿ ಮಾಡಿರುತ್ತಾರೆ. ಯಾಕೆ ನಮ್ಮ ಜಮೀನಿಗೆ ಬಂದು ಕಲ್ಲುಗಳನ್ನು ನಾಶಮಾಡುತ್ತಿದ್ದೀರಾ ಎಂದು ಕೇಳಿದ್ದಕ್ಕೆ ಆರೋಪಿಗಳು ನನಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆದಿರುತ್ತಾರೆ. ನಮ್ಮ ಜಮೀನಿನ ಸಾಗುವಳಿಗೆ ಆರೋಪಿಗಳು ಅಡ್ಡಿಪಡಿಸಿರುತ್ತಾರೆ. ಸರ್ವೆ ಮಾಡಿಸಿದರು ಸಹ ಆರೋಪಿಗಳು ಪದೆ ಪದೆ ಕಲ್ಲುಗಳನ್ನು ಕಿತ್ತುಹಾಕುವುದು ಮಾಡುತ್ತಾರೆ. ಆರೋಪಿಗಳು ವಿನಾಃ ಕಾರಣ ನಮಗೆ ತೊಂದರೆ ನೀಡುತ್ತಾರೆ. ಈ ಸಂಬಂಧ ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ದೂರನ್ನು, ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರುನ್ನು ನಿಪಿ.1 ಎಂದು, ಸಾಕ್ಷಿಯು ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ಆರೋಪಿಗಳು ಗಲಾಟೆ ಮಾಡಿದ ದಿಃ25.11.2022 ಮಧ್ಯಾಹ್ನ 2.45 ಗಂಟೆ ಎಂದರೆ ಸರಿ. ಆರೋಪಿಗಳು ಸಮಾನ ಉದ್ದೇಶದಿಂದ ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ. ಆರೋಪಿಗಳು ಸೇರಿಕೊಂಡು ಕೈಗಳಿಂದ ನನ್ನ ಮೈಕೈಗೆ ಹೊಡೆದು ಗಾಯ ಪಡಿಸಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನಾನು ದೂರು ಕೊಟ್ಟ ಮೇರೆಗೆ ಪೊಲೀಸರು ದಿಃ27.11.2022 ರಂದು ಘಟನಾ ಸ್ಥಳಕ್ಕೆ ಬಂದು ನಾನು ಸ್ಥಳ ತೋರಿಸಿದ ಮೇರೆಗೆ ನನ್ನ, ಚಾಸಾ.5 ಮತ್ತು 6 ರ ಸಮಕ್ಷಮ ಬೆಳಿಗ್ಗೆ 11 ರಿಂದ 12 ಗಂಟೆಯ ಸಮಯದಲ್ಲಿ ಸ್ಥಳ ಪಂಚನಾಮೆ ಜರುಗಿಸಿ, ಕಚ್ಚಾ ನಕಾಶೆಯನ್ನು ತಯಾರಿಸಿ, 2 ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿ. ನಾವೆಲ್ಲ ಪಂಚನಾಮೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸ್ಥಳ ಪಂಚನಾಮೆಯ ಸಂದರ್ಭ ಪೊಲೀಸರಿಗೆ ಸರ್ವೆ ನಂ.4/2 ರ ನಮ್ಮ ಜಮೀನಿನ ಪಹಣಿ ಮತ್ತು ಸರ್ವೆ ಹದ್ದುಬಸ್ತು ಪ್ರತಿಗಳನ್ನು ನೀಡಿರುತ್ತೇನೆ ಎಂದರೆ ಸರಿ. ಚಾಸಾ.2 ರಿಂದ 4 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ.

ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಂದರ್ಭ ತೆಗೆದ 2 ಪೋಟೋಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ಸರ್ವೆ ನಂ.4/2 ಪಹಣಿಯನ್ನು ಸಾಕ್ಷಿಯು ನೋಡಿ ಗುರುಸಿದ್ದು ಅದನ್ನು ನಿಪಿ.5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ– ಆರೋಪಿ ಪರ ಶ್ರೀ ಸಿ.ಆರ್   ವಕೀಲರಿಂದಃ–</u>

ಆರೋಪಿ ಪರ ವಕೀಲರು ಪಾಟೀ ಸವಾಲಿ ಕಾಲಾವಕಾಶ ಕೋರಿದ್ದು ಸೂಕ್ತ ಸಕಾರಣ ನೀಡದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.